ರಾಶಿ ಮುಗದಂ ಎನ್ನುವ ಬೇರೇ ಹೆಸರಿನಲ್ಲಿ ತರೆದುಕೊಂಡು ಅಲ್ಲಿ ಒಂದು ಪಲ್ಲ. ಭತ್ತಕ್ಕೆ 43 ರಿಂದ 45ರ ವರೆಗೆ ಎಂದು ನಿಗದಿ ಮಾಡಿ ಸರಕಾರದವರು ಕೊಳ್ಳುತ್ತಿದ್ದಾರೆ. ಇಲ್ಲಿರುವ ಭತ್ತವನ್ನೇ ಕ್ಯಾನುಬ್ರೀಡ್ ಮಾಡಿ ಒಂದೇ ರೀತಿಯಾದ ಭತ್ತಕ್ಕೆ ಬೇರೆ ಬೇರೇ ಜಾಗದಲ್ಲಿ ಬೇರೆ ದರಗಳನ್ನು ನಿಗದಿ ಮಾಡಿದರೆ ಸರಿಯಾಗಿರುತ್ತದೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಮಾನ್ಯ ಸದಸ್ಯರು ಹೇಳುತ್ತಿರುವಂತೆ ನಾನು ಹಿಂದೆ ಶಿವಮೊಗ್ಗ ಜಿಲ್ಲೆಗೆ ಬಂದಿದ್ದಾಗ ಮಾನ್ಯ ಸದಸ್ಯರಾದ ಶ್ರೀಮಾನ್ ಲಕ್ಷ್ಮಿಕಾಂತಪ್ಪನವರು ಹಾಗೂ ಇನ್ನಿತರ ಅನೇಕ ಮಾನ್ಯ ಸದಸ್ಯರುಗಳು ಬಂದು ಇದರ ಸ್ಯಾಂಪಲನ್ನು ತೋರಿಸಿ ಹೇಳಿದರು. ಅವರು ಹೇಳುವಂತೆ ಮಂಗಳೂರಿನಲ್ಲಿ ಮಸ್‌ಕಿಟ್ ಮತ್ತು ಧಾರವಾಡದಲ್ಲಿ ಮುಗದ್ ಭತ್ತ ಎಂದು ಮತ್ತು ತಮ್ಮ ಕಡೆ ದಬ್ಬಣ ಸಾಲಾ ಎಂದು ಮೂರು ತರಹ ಹೆಸರಿರುವ ಭತ್ತದ ಸ್ಯಾಂಪಲ್ಲುಗಳನ್ನೂ ಅಗ್ರಿಕಲ್‌ಚರಲ್ ರೀಸರ್ಚ್ ಇನ್‌ಸ್ಟಿಟ್ಯೂಟಿಗೆ ಪರೀಕ್ಷಲನೆಗಾಗಿ ಕಳುಹಿಸಲಾಗಿದೆ. ಅದರ ಬಗ್ಗೆ ಅವರು ವರದಿ ಕಳುಹಿಸುವುದರಲ್ಲಿದ್ದಾರೆ. ಅದನ್ನು ನೋಡಿಕೊಂಡು ಮುಂದೆ ಏನು ಮಾಡಬೇಕೋ ನೋಡಬೇಕು. ನಿಮ್ಮ ಕಡೆ ಇರುವ ಭತ್ತದ ಹೆಸರು ಚೆನ್ನಾಗಿಲ್ಲ. ದಬ್ಬಣಸಾಲಾ ಎನ್ನುವುದಕ್ಕೆ ಬದಲಾಗಿ 'ಸುಂದರ ಸಾಲಾ' ಎಂದು ಇಟ್ಟರೆ ಸರಿಯಾಗಿರುತ್ತಿತ್ತು. ಹೆಸರೇ ಬಹಳ ಮುಖ್ಯವಾದುದು, ತಾವು ನೋಡಿರುವ ಹಾಗೆ ಹೆಣ್ಣುಮಕ್ಕಳ ಹೆಸರನ್ನು ಮಾರವ್ವ, ಮಸಣವ್ವ ಎಂದು ಇಟ್ಟರೆ ಸರಿಯಾಗಿರುವುದಿಲ್ಲ ಎಂದು ಚೆನ್ನಾಗಿರುವ ಹೆಸರನ್ನು ಇಡುತ್ತಾರೆ. ಆದುದರಿಂದ ಹೆಸರು, ಈಗ ನಿಮ್ಮಲ್ಲಿರುವುದು ಕಷ್ಟವಾಗಿದೆ. (ನಗು)

Sri SANJEEVANATH AIKALA.—The answer to question (*b*) is 'Yes'. - What are the steps you have taken to protect the interests of the growers ?

Sri M. V. KRISHNAPPA.—We consider that the price fixed by the Government is a reasonable and fair price and Government is prepared to take at any time if the farmer wants to sell to the Government. When nobody is prepared to take from him, the Government is prepared.

ಶ್ರೀ ಬಿ. ಭಾಸ್ಕರ ಶೆಟ್ಟಿ.—ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಗಿಡ್ಡ ಭತ್ತ ಎಂದಿರುವುದನ್ನು 36 ರೂಪಾಯಿಗಳಷ್ಟು ಒಂದು ಕ್ವಿಂಟಾಲಿಗೆ ಎಂದು ನಿಗದಿ ಮಾಡಿರುವುದು ಬಹು ಕಡಿಮೆ ಇದನ್ನು ಹೆಚ್ಚು ಮಾಡಬೇಕೆಂದು ಸರಕಾರಕ್ಕೆ ಅಲ್ಲಿನ ಮುಖಂಡರುಗಳಿಂದಾಗಲೀ ಕೋ-ಆಪರೇಟಿವ್ ಸೊಸೈಟಿಗಳಿಂದಾಗಲೀ ಮನವಿಗಳು ಬಂದಿವೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಸಾಕಷ್ಟು ಕ್ಯಾನರಾದಿಂದ ನಮಗೇನೂ ಭತ್ತ ಯಾವ ದರ ನಿಗದಿ ಮಾಡಿದರೂ ಬರುವುದಿಲ್ಲ. ಅಲ್ಲಿಂದ ಎಲ್ಲ ಹೊರಕ್ಕೇ ಹೊರಟುಹೋಗುತ್ತದೆ. ಎಲ್ಲ ಕಡೆಗಳಿಂದಲೂ ನುಮಾರು ಆರುನೂರು ವೆರೈಟಿಗಳ ಭತ್ತ ಇಪೆ ಎಂದು ನಾವು ಎಲ್ಲವನ್ನೂ ಕ್ಲಾಸಿಫೈ ಮಾಡುವುದು ಕಷ್ಟ, ಕೊಡಗು ಭಾಗದಲ್ಲಿ ಕರಿ ಬಳಿಯ ಹಾಗೂ ಬಳಿಯ ಕರಿಯ ಎನ್ನುವ ಭತ್ತ ಇದೆ, ಇದಕ್ಕೆಲ್ಲಾ ಬೆಲೆ ನಿಗದಿ ಮಾಡುವುದು ಕಷ್ಟ. ಇದನ್ನೆಲ್ಲಾ ಅಗ್ರಿಕಲ್ಚರ್ ಇಲಾಖೆಯ ಎಕ್ಸ್‌ಪರ್ಟುಗಳು ಹೇಳಬೇಕು.

Crushing Capacity of the Thungabhadra Sugar Factory.

*Q.—141. Sri T. D. DEVENDRAPPA (Bhadravathi).—

Will the Government be pleased to state :—

(*a*) the present crushing capacity per day of the Thungabhadra Sugar Factory and the quantity of sugarcane crushed per day in the past ;

(*b*) the extent of area under sugarcane cultivation in Bhadravati, Shimoga, Channagiri and Honali Taluks during the year 1964 ;

(*c*) whether it is not a fact that the ryots are put to loss as it is not possible to crush the heavy quantity of sugarcane grown in that area in that factory ;

(SRI T. D. DEVENDRAPPA)

(*d*) whether they intend granting a licence to open a Sugar Factory in the Private Sector?

A.—Sri K. MALLAPPA (Minister for Industries and Commerce).—

(*a*) Crushing capacity 800 tons per day and cane crushed 593 tons per day on an average.

(*b*) *For 1963-64*:

Bhadravathi	1,250 acres
Shimoga	5,210 acres
Channagiri	305 acres
Honnali	185 acres

(*c*) No.

(*d*) The Licensing Authority is the Government of India and not the State Government.

ಶ್ರೀ ಟಿ. ಡಿ. ದೇವೇಂದ್ರಪ್ಪ.—ದಿನ ಒಂದಕ್ಕೆ 593 ಟನ್ ಕಬ್ಬು ಕ್ರಷ್ ಆಗುತ್ತದೆ ಎಂದು ಉತ್ತರದಲ್ಲಿ ಹೇಳಿದ್ದೀರಿ, ಕಬ್ಬನ್ನು ಅರೆಯುವುದಕ್ಕೆ ಸಾಕಷ್ಟು ಶಕ್ತಿಯಿಲ್ಲದೆ ರೈತರಿಗೆ ನಷ್ಟವಾಗುತ್ತಿದೆಯೆ ಎಂದು ಕೇಳಿರುವುದಕ್ಕೆ ಇಲ್ಲವೆಂದು ಹೇಳಿದ್ದೀರಿ. ಒಂದು ದಿವಸ ಒಂದು ಲಾರಿ ಕಬ್ಬನ್ನು ರೈತ ತೆಗೆದುಕೊಂಡು ಕಾರ್ಖಾನೆಗೆ ಹೋದರೆ ಅದನ್ನು 24 ಗಂಟೆಯೊಳಗೆ ಅನ್‌ಲೋಡ್ ಮಾಡಬೇಕು. ಲಾರಿಯ ಮಾಲೀಕ 24 ಗಂಟೆಗಳ ಬಾಡಿಗೆಯನ್ನು ರೈತನಿಂದ ವಸೂಲು ಮಾಡಿಕೊಳ್ಳುವ ಸಂದರ್ಭವಿರುವುದರಿಂದ, ಇದರ ಬಗ್ಗೆ ತಾವು ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ?

ಶ್ರೀ ಕೆ. ಮಲ್ಲಪ್ಪ.—ಹಾಗಿದೆ ಎಂದು ನಾವು ಒಪ್ಪಿಕೊಂಡಿಲ್ಲ, ಆ ಕಾರ್ಖಾನೆಯ ಯಂತ್ರದ ಕ್ರಷಿಂಗ್ ಕೆಪ್ಯಾಸಿಟಿ ದಿನಕ್ಕೆ 800 ಟನ್ ಇದೆ, ಆದ ಕಾರಣ ರೈತರಿಗೆ ತೊಂದರೆಯಾಗಿಲ್ಲ, ಕಬ್ಬು ಅಷ್ಟು ಸಿಕ್ಕುತ್ತಿಲ್ಲ.

ಶ್ರೀ ಟಿ. ಡಿ. ದೇವೇಂದ್ರಪ್ಪ.—ರೈತರಿಗೆ ತೊಂದರೆ ಆಗುತ್ತಿದೆ, 24 ಗಂಟೆಗೆ ಒಂದು ರೋಡ್ ಅನ್‌ಲೋಡ್ ಆಗುತ್ತದೆ, ರೈತ 24 ಗಂಟೆಗೆ ಲಾರಿ ಬಾಡಿಗೆ ಕೊಡಬೇಕಾಗುತ್ತದೆ, ಈ ನಷ್ಟವನು ತಪ್ಪಿಸಲು ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ?

ಶ್ರೀ ಕೆ. ಮಲ್ಲಪ್ಪ.—ನಾನಾಗಲೇ ಹೇಳಿದ್ದೇನೆ, ಸಾಕಷ್ಟು ಕಬ್ಬು ಸಿಕ್ಕುತ್ತಿಲ್ಲ. ಹೋದ ವರ್ಷ 93 ದಿವಸ ಮಾತ್ರ ಆ ಕಾರ್ಖಾನೆ ಕೆಲಸ ಮಾಡಿತು, 180 ದಿವಸ ಕೆಲಸ ಮಾಡಬೇಕಾಗಿತ್ತು. ಇದಕ್ಕೆ ಕಾರಣ ಸಾಕಷ್ಟು ಕಬ್ಬು ಸಿಕ್ಕದೇ ಹೋದದ್ದು. ಆದುದರಿಂದ ಕಬ್ಬು ಇಲ್ಲದೆ ತೊಂದರೆಯಾಗುತ್ತಿದೆಯೇ ಏನಾ ಕಬ್ಬು ಅರೆಯುವುದಕ್ಕೆ ಶಕ್ತಿಯಿಲ್ಲದೆ ತೊಂದರೆಯಾಗುತ್ತಿಲ್ಲ.

ಶ್ರೀ ಜಿ. ವಿ. ಗೌಡ.—ಯಾರಾದರೂ ರೈತರು ಕಬ್ಬನ್ನು ಆ ಕಾರ್ಖಾನೆಗೆ ತೆಗೆದುಕೊಂಡು ಹೋಗಿ ಅದನ್ನು ಆ ಕಾರ್ಖಾನೆಯವರು ತೆಗೆದುಕೊಳ್ಳದೇ ಹೋದ ಸಂದರ್ಭಗಳಿವೆಯೆ?

ಶ್ರೀ ಕೆ. ಮಲ್ಲಪ್ಪ.—ಇಲ್ಲ, ಎಷ್ಟು ಬಂದರೂ ತೆಗೆದುಕೊಳ್ಳುತ್ತಾರೆ.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಆ ಪ್ರದೇಶದಲ್ಲಿ ಸುಮಾರು ಎರಡೂವರೆ ಲಕ್ಷ ಎಕರೆಗಳಲ್ಲಿ ಕಬ್ಬು ಉತ್ಪತ್ತಿ ಬರುವ ಭೂಮಿ ಇದೆ. ಆದುದರಿಂದ ಈ ಕಾರ್ಖಾನೆಗೆ ತೊಂದರೆಯಾಗದಿರುವ ಹಾಗೆ ಇನ್ನೊಂದು ಕಾರ್ಖಾನೆ ಸ್ಥಾಪನೆ ಮಾಡುವುದಕ್ಕೆ ಖಾಸಗಿ ಜನ ಮುಂದೆ ಬಂದರೆ, ಕೇಂದ್ರ ಸರ ಕಾರಕ್ಕೆ ನೀವು ಶಿಫಾರಸು ಮಾಡುತ್ತೀರಾ?

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ನನ್ನದೊಂದು ಪಾಯಿಂಟ್ ಆಫ್ ಆರ್ಡರ್ ಇದೆ, ಆದೇನೆಂದರೆ ಕಬ್ಬು ಸಾಲದು ಎಂದು ಮಂತ್ರಿಗಳು ಹೇಳುತ್ತಾರೆ, ಮಾನ್ಯ ಸದಸ್ಯರು ಇನ್ನೊಂದು ಕಾರ್ಖಾನೆ ಬೇಕೆಂದು ಕೇಳುತ್ತಾರೆ. ಇದರಲ್ಲರುವ ನಿಜಸಂಗತಿ ನಮಗೆ ಗೊತ್ತಾಗುವುದಿಲ್ಲ. ಆದುದರಿಂದ ಈ ಪ್ರಶ್ನೆಯ ಬಗ್ಗೆ ಅರ್ಧಗಂಟೆ ಚರ್ಚೆಗೆ ಅವಕಾಶ ಕೊಟ್ಟರೆ ಇಬ್ಬರ ಮನಸ್ಸಿನಲ್ಲರುವುದನ್ನೂ ಕೇಳಿ ಸರಿಯಾಗಿ ತಿಳಿದುಕೊಳ್ಳಬಹುದು.

Mr. SPEAKER.—Is that a point of order to be raised to-day being the last day?

ಶ್ರೀ ಟಿ. ಡಿ. ದೇವೇಂದ್ರಪ್ಪ.—ಈಗಾಗಲೇ ಎರಡೂವರೆ ಲಕ್ಷ ಎಕರೆ ಭೂಮಿ ಇದೆ ಅಲ್ಲ. ಆದುದರಿಂದ ಇನ್ನೊಂದು ಕಾರ್ಖಾನೆಯನ್ನು ಹಾಕುವುದಕ್ಕೆ ಯಾರಾದರೂ ಖಾಸಗಿ ಜನರು ಮುಂದೆ ಬಂದರೆ ಅಂಥವರಿಗೆ ಲೈಸೆನ್ಸ್ ಕೊಡಲು ಕೇಂದ್ರಕ್ಕೆ ಶಿಫಾರಸು ಮಾಡಿ ಕೊಡಿಸುತ್ತೀರ ?

ಅಧ್ಯಕ್ಷರು.—ಅದು ಹೈಪೊಥಟಿಕಲ್ ಆಯಿತು, ಹಾಗೆ ಬಂದರೆ ಹೀಗೆ ಮಾಡುತ್ತೀರ ಎಂದು ಕೇಳುವುದು. ಬಂದರೆ ನೋಡೋಣ ಎಂದು ಹೇಳುತ್ತಾರೆ.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಬಂದಿದೆ.

ಶ್ರೀ ಕೆ. ಮಲ್ಲಪ್ಪ.—ಬಹಳ ಊಹೆಗಳಿವೆ ಇದರಲ್ಲಿ ಹೆಚ್ಚು ಕಬ್ಬು ಬೆಳೆದರೆ, ಯಾರಾದರೂ ಕಾರ್ಖಾನೆ ಮಾಡಲು ಮುಂದೆ ಬಂದರೆ ಲೈಸೆನ್ಸ್ ಕೊಡುತ್ತೀರ ಎಂದು ಮಾನ್ಯ ಸದಸ್ಯರು ಕೇಳುತ್ತಾರೆ. ಹೆಚ್ಚು ಕಬ್ಬು ಬೆಳೆದರೆ, ಯಾರಾದರೂ ಸರಿಯಾದ ಜನರು ಮುಂದೆ ಬಂದರೆ ಆಲೋಚನೆ ಮಾಡಬಹುದು.

Cauvery Water Supply Scheme

*Q.—179. Sri G. V. GOWDA (Palyam).—

Will the Government be pleased to state :—

(*a*) whether the Cauvery Long Range Water Supply Scheme has been taken up for execution ;

(*b*) the estimated cost for Water Supply, distribution and sewerage respectively ;

(*c*) the quantity of Cast Iron (Pipes) required for the project ;

(*d*) whether tenders have been called for to secure the Cast Iron Pipes and if not the reasons therefor ?

A.—Sri K. PUTTASWAMY (Minister for Municipal Administration).—

(*a*) Yes.

(*b*) (i) Water Supply ... Rs. 15,82,00,000.
(ii) Distribution ... Rs. 3,68,00,000.
(iii) Sewerage & Treatment Works ... Rs. 6,50,00,000.

(*c*)

	C. I. Pipes.
4" dia. ...	5,00,000
6" dia. ...	1,50,000
8" dia. ...	50,000
9" dia. ...	30,000
10" dia. ...	20,000
12" dia. ...	1,50,000
14" dia. ...	5,150
15" dia. ...	56,650
18" dia. ...	29,250
20" dia. ...	2,160
21" dia. ...	1,100
22" dia. ...	6,530
24" dia. ...	25,740
27" dia. ...	12,90
28" dia. ...	24,000
30" dia. ...	13,400